# ಬ್ರಿಟಿಷರ ಕಾಲದ ಬಿಜಾಪುರ ಜಿಲ್ಲೆಯ ಶಿಕ್ಷಣ ವ್ಯವಸ್ಥೆ

ಮಂಗಲಾ ಬೇವೂರ
ಉಪನ್ಯಾಸಕಿ, ಇತಿಹಾಸ ವಿಭಾಗ, ರುದ್ರಗೌಡ ಪಾಟೀಲ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬೀಳಗಿ.

DOI: https://doi.org/10.5281/zenodo.17938041

## ABSTRACT:

19 ನೇ ಶತಮಾನದ ಪ್ರಾರಂಭದಲ್ಲಿ ಮುಂಬೈ ಕರ್ನಾಟಕ ಒಂದು ಸಂಕೀರ್ಣ ವ್ಯವಸ್ಥೆಯನ್ನು ಒಳಗೊಂಡ ಪ್ರಾಂತ್ಯವಾಗಿತ್ತು. ಮೂರನೆಯ ಆಂಗ್ಲೋ-ಮರಾಠ ಯುದ್ಧದಲ್ಲಿ ಎರಡನೇ ಬಾಜಿರಾಯನು ಸೋತು ಇಡೀ ದಕ್ಷಿಣ ಮರಾಠ ಪ್ರದೇಶವನ್ನು ಬ್ರಿಟಿಷರ ಆಡಳಿತಕ್ಕೆ ಒಳಪಡಿಸಿದನು. ಈ ದಕ್ಷಿಣ ಮರಾಠ ಪ್ರದೇಶವು ಬಿಜಾಪುರ, ಬೆಳಗಾವಿ, ಮತ್ತು ಧಾರವಾಡ ಪ್ರಾಂತ್ಯಗಳನ್ನು ಒಳಗೊಂಡ ಪ್ರದೇಶವಾಗಿತ್ತು. ಇದರ ಸಂಪೂರ್ಣ ಆಡಳಿತ ಬ್ರಿಟಿಷರ ಆಳ್ವಿಕೆಗೆ ಒಳಪಟ್ಟಿತ್ತು. ಆಡಳಿತಾತ್ಮಕ ಹಿತ ದೃಷ್ಟಿಯಿಂದ ಕ್ರಿ. ಶ. 1864 ರಲ್ಲಿ ಸೋಲಾಪುರ ಜಿಲ್ಲೆಗೆ ಸೇರಿದ ಭೀಮ, ಕೃಷ್ಣಾ ನದಿಯ ನಡುವಿನ ಪ್ರದೇಶಗಳಾದ ಇಂಡಿ, ದೇವರಹಿಪ್ಪರಗಿ, ಬಿಜಾಪುರ, ಮನಗೂಳಿ ಮತ್ತು ಮುದ್ದೇಬಿಹಾಳ ಈ ತಾಲೂಕುಗಳನ್ನು ಸೇರಿಸಿದರು. ಬಾಗಲಕೋಟೆ, ಬದಾಮಿ, ಹುನಗುಂದ ಈ ಮೂರು ತಾಲೂಕುಗಳನ್ನು ಕಲಾದಗಿ ಜಿಲ್ಲೆಯನ್ನಾಗಿ ಮಾಡಲಾಯಿತು. 1884 ರಲ್ಲಿ ಜಿಲ್ಲಾ ಕೇಂದ್ರವಾಗಿದ್ದ ಕಲಾದಗಿಯನ್ನು ವಿಜಾಪುರಕ್ಕೆ ವರ್ಗಾಯಿಸಿ ಬಿಜಾಪುರ ಜಿಲ್ಲೆಯನ್ನಾಗಿ ಮಾಡಿದರು.

## KEYWORDS:

ಕ್ರೈಸ್ತ ಮಿಷನರಿ, ಶಿಕ್ಷಣ, ಸದರ್ನ್ ಮರಾಠ, ವುಡ್ಸ್ ಡಿಸ್ಪ್ಯಾಚ್ ವರದಿ, ಹಿಂದುಳಿದ ವರ್ಗಗಳ.

**ಪ್ರಸ್ತಾವನೆ:**

ಬ್ರಿಟಿಷರ ವಸಾಹತು ಶಕ್ತಿಯ ಉದಯದೊಂದಿಗೆ ಬಿಜಾಪುರ ಜಿಲ್ಲೆ ಹೊಸದೊಂದು ಆಡಳಿತ, ಸಂಸ್ಕೃತಿ ಮತ್ತು ಸಾಮಾಜಿಕ ಪರಿವರ್ತನೆಗಳ ಯುಗಕ್ಕೆ ಕಾಲಿಟ್ಟಿತು. ಪರಂಪರೆಯ ಆಡಳಿತ ವಿಧಾನಗಳನ್ನು ಬದಲಾಯಿಸುತ್ತಾ, ಬ್ರಿಟಿಷರು ಕಾನೂನು, ಶಿಕ್ಷಣ, ತೆರಿಗೆ ಹಾಗೂ ಭೂಮಿಯ ವ್ಯವಸ್ಥೆಯಲ್ಲಿ ಹಲವು ನವೀಕರಣಗಳನ್ನು ಪರಿಚಯಿಸಿದರು. ಈ ಬದಲಾವಣೆಗಳು ಬಿಜಾಪುರದ ಜನಜೀವನದ ಹಾದಿಯನ್ನು ಬದಲಾಯಿಸಿ, ಜಿಲ್ಲೆಯ ಆರ್ಥಿಕತೆ, ಕೃಷಿ ಮತ್ತು ಶಿಕ್ಷಣದ ಮೇಲೂ ಆಳವಾದ ಪ್ರಭಾವ ಬೀರಿದವು. ವಸಾಹತು ಪ್ರಭಾವದ ನಡುವೆ ಬಿಜಾಪುರದ ಜನರು ತಮ್ಮ ಸಾಂಸ್ಕೃತಿಕ ಗುರುತನ್ನು ಉಳಿಸಿಕೊಂಡು, ಹೊಸ ಬದಲಾವಣೆಗಳಿಗೆ ಹೊಂದಿಕೊಂಡ ಕಥೆಯನ್ನು ಈ ಅಧ್ಯಾಯ ವಿವರಿಸುತ್ತದೆ.

ಮರಾಠ ಸಾಮಂತ ಸಂಸ್ಥಾನಗಳು ಜಾಗೀರದಾರರು ಮತ್ತು ಮುಧೋಳ, ಜಮಖಂಡಿಯಂತಹ ಸಂಸ್ಥಾನಗಳು ಇನ್ನೂ ಅಸ್ತಿತ್ವದಲ್ಲಿದ್ದ ಈ ಜಿಲ್ಲೆಯಲ್ಲಿ ಶಿಕ್ಷಣದ ವ್ಯವಸ್ಥೆಯನ್ನು ಗುರುತಿಸುವುದು ಕಷ್ಟವೇ ಸರಿ. "ಶಿಕ್ಷಣ ಎಂದರೇನು?" ಎಂಬ ಪ್ರಶ್ನೆಗೆ ಡಾ. ರಾಧಾಕೃಷ್ಣನ್ ಅವರು "ಎಲ್ಲರೊಡನೆ ಸ್ನೇಹ, ಘನತೆ ಮತ್ತು ಗೌರವದಿಂದ ವರ್ತಿಸುವಂತೆ ಮಾಡುವುದೇ ಶಿಕ್ಷಣ" ಎಂದು ವ್ಯಾಖ್ಯಾನಿಸಿದ್ದಾರೆ. ಶಿಕ್ಷಣವನ್ನು ಕುರಿತಂತೆ ಮರಾಠರ ಕಾಲದಿಂದಲೂ ಕನ್ನಡ ಪ್ರದೇಶದ ಸ್ಥಳೀಯ ರಾಜರು ಸಂಸ್ಥಾನಗಳು ಶಿಕ್ಷಣವನ್ನು ಕಡೆಗಣಿಸಿರಲಿಲ್ಲ. ಆದರೆ ಆಧುನಿಕ ಸ್ವರೂಪಕ್ಕೆ ಹೋಲಿಸಿದರೆ ಅದರಲ್ಲಿ ದೋಷಗಳಿದ್ದವು ಹಾಗಂತ ಸಮಾಜದ ಎಲ್ಲಾ ವರ್ಗಗಳು ಅನಕ್ಷರಸ್ಥರಾಗಿರಲಿಲ್ಲ. 1813 ರಲ್ಲಿ ವಾರನ್

ಹೆಸ್ಟಿಂಗ್ಸ್ ಭಾರತೀಯರು ಸಾಮಾನ್ಯವಾಗಿ ಓದು, ಬರಹ ಮತ್ತು ಲೆಕ್ಕದಲ್ಲಿ ಯೂರೋಪಿನ ಯಾವುದೇ ದೇಶದ ಸಾಮಾನ್ಯ ಪ್ರಜೆಗಳಿಗಿಂತ ಉತ್ತಮ ಅವಕಾಶಗಳನ್ನು ಪಡೆದಿದ್ದಾರೆ ಎಂದು ಬರೆದಿದ್ದಾನೆ. ಈ ಹೇಳಿಕೆಯನ್ನು ಬಿಜಾಪೂರ ಜಿಲ್ಲೆಗೂ ಅನ್ವಯಿಸಬಹುದು.

**ಬ್ರಿಟಿಷರ ಕಾಲದ ಬಿಜಾಪುರ ಜಿಲ್ಲೆಯ ಶಿಕ್ಷಣ ವ್ಯವಸ್ಥೆ**

ಯುರೋಪ್ ಖಂಡದಿಂದ ಪ್ರಾಮುಖ್ಯವಾಗಿ ಐದು ಪ್ರಮುಖ ದೇಶಗಳಿಂದ ಮಿಷನರಿಗಳು ಬಂದವು. ಅವರಲ್ಲಿ ರೋಮನ್ ಕ್ಯಾಥೋಲಿಕ್ ಹಾಗೂ ಪ್ರೊಟೆಸ್ಟಂಟ್ ಎಂಬ ಪಂಗಡಗಳಿದ್ದಾಗ್ಯೂ ಶಿಕ್ಷಣ ಪ್ರಸಾರದ ಕಾರ್ಯದಲ್ಲಿ ಅವರಲ್ಲೆಲ್ಲಾ ಆರೋಗ್ಯಪೂರ್ಣವಾದ ಸ್ಪರ್ಧೆ ಇದ್ದಿತು. ಮಿಷನರಿಗಳಿಗೆ ಆಯಾ ದೇಶಗಳಲ್ಲಿನ ಸಂಘ-ಸಂಸ್ಥೆಗಳಿಂದ ವಿಫುಲವಾಗಿ ಧನ ಸಹಾಯ ದೊರಕುತ್ತಿದ್ದರಿಂದ ಭಾರತ ದೇಶದಲ್ಲಿ ಮಿಷನರಿಗಳ ಕೆಲಸ ಕಾರ್ಯಗಳು ಅಡೆತಡೆಗಳಿಲ್ಲದೇ ಭರದಿಂದ ಸಾಗಿದವು. ಮಿಷನರಿಗಳು ಅತ್ಯಂತ ಶ್ರದ್ಧೆಯಿಂದ, ಉತ್ಸಾಹದಿಂದ ಶಿಕ್ಷಣ ಕಾರ್ಯ ನಡೆಸಲಾರಂಭಿಸಿದರು. ಈ ಕಾಲ ಘಟ್ಟದಲ್ಲಿ ದೇಶೀಯ ಶಿಕ್ಷಣ ವ್ಯವಸ್ಥೆ ಹಣಕಾಸಿನ ತೊಂದರೆಗಳಿಂದ ಹಾಗೂ ಪ್ರೋತ್ಸಾಹದ ಕೊರತೆಯಿಂದ ಬಳಲುತ್ತಿದ್ದಿತು. ಹೀಗಾಗಿ ಭಾರತದಲ್ಲಿ ಸುದೀರ್ಘವಾಗಿ ನೆಲೆಗೊಂಡಿದ್ದ ದೇಶೀಯ ಶಿಕ್ಷಣ ವ್ಯವಸ್ಥೆ ಸಹಜವಾಗಿ ಅಸಮಾನತೆಯನ್ನು ಹೊಂದಿತು. ಆಗ ಅಂದರೆ 19ನೇ ಶತಮಾನದ ಪ್ರಾರಂಭದಲ್ಲಿ ಉತ್ತಮವಾದ ಯುರೋಪಿಯನ್ ಶಿಕ್ಷಣ ವ್ಯವಸ್ಥೆ ಮಿಷನರಿಗಳ ಪ್ರಯತ್ನದ ಫಲವಾಗಿ ದೇಶದಲ್ಲಿ ನೆಲೆಗೊಂಡಿತು.

1. ಶಿಕ್ಷಣ ಸಮಾಜದ ಎಲ್ಲ ವರ್ಗದ ಜನರಿಗೆ ನೀಡುವುದು. ಅವರಿಗೆ ಹಿಂದೂ ಸಮಾಜದ ಜಾತಿ ಪದ್ಧತಿ ಬಾಧಕವಾಗಲಿಲ್ಲ.
2. ಮಿಷನರಿಗಳು ಹೆಣ್ಣು ಮಕ್ಕಳಿಗೆ ಶಿಕ್ಷಣ ನೀಡಲು ಹೆಚ್ಚಿನ ಮುತುವರ್ಜಿ ವಹಿಸಿದರು. ದೇಶೀಯ ವ್ಯವಸ್ಥೆಯಲ್ಲಿ ಇದಕ್ಕೆ ಅವಕಾಶವಿರಲಿಲ್ಲ.
3. ಮಿಷನರಿಗಳು ಅಸ್ಪೃಶ್ಯರು, ಬಡವರು, ನಿರ್ಗತಿಕರಿಗೆಲ್ಲಾ ಶಿಕ್ಷಣದ ಬಾಗಿಲನ್ನು ತೆರೆದರು.
4. ಶಾಲೆಗೆ ಬರುವ ಮಕ್ಕಳಿಗೆ ಬಟ್ಟೆಬರೆ, ಶಿಷ್ಯವೇತನವನ್ನು ಸಹ ನೀಡಿ ಪ್ರೋತ್ಸಾಹಿಸಿದರು.
5. ಮಕ್ಕಳಿಗೆ ವಾಸ್ತವ್ಯಕ್ಕಾಗಿ ವಸತಿ ನಿಲಯ ಸ್ಥಾಪಿಸಿ ಉಚಿತವಾಗಿ ಮಕ್ಕಳ ಊಟ ಹಾಗೂ ಇನ್ನಿತರ ಸೇವೆಯನ್ನು ಒದಗಿಸಿದರು.
6. ಕಲಿಯುವ ಮಕ್ಕಳಿಗೆ ಉಚಿತವಾಗಿ ಪಠ್ಯಪುಸ್ತಕಗಳನ್ನು ಹಾಗೂ ಇತರ ಪರಿಕರಗಳನ್ನು ನೀಡಿದರು. ಕಾರಣ ಪಠ್ಯಪುಸ್ತಕದ ಮುದ್ರಣ ಮಿಷನರಿಗಳ ಯತ್ನದಿಂದ ದೇಶದಲ್ಲಿ ಪ್ರಾರಂಭವಾಯಿತು.
7. ದೇಶೀಯ ಭಾಷೆಗಳ ಜೊತೆಗೆ, ಇಂಗ್ಲೀಷ್ ಭಾಷೆಯನ್ನು ಕಲಿಸಲಾರಂಭಿಸಿದರು.

19ನೇ ಶತಮಾನದ ಉತ್ತರಾರ್ಧದಲ್ಲಿ ಬ್ರಿಟಿಷ್ ಸರ್ಕಾರ ಆಡಳಿತದಲ್ಲಿ ಸಾರ್ವಜನಿಕ ಶಿಕ್ಷಣವನ್ನು ಹಿಡಿದು ಎಲ್ಲಾ ವಲಯಗಳನ್ನು ಸ್ಥಿರೀಕರಿಸುವ ಯೋಜನೆಗಳನ್ನು ಕೈಗೊಂಡರು. ಬ್ರಿಟೀಷರ ದೃಷ್ಟಿಯಲ್ಲಿ ಆಗಿನ ದೇಶೀಯ ಶಿಕ್ಷಣ ಪದ್ಧತಿಯಲ್ಲಿನ ದೋಷಗಳೆಂದರೆ, ಶಿಕ್ಷಣವು ವ್ಯಾಪಕವಾಗಿರದೆ ಕೆಲವೇ ಜನರು ಅದರ ಪ್ರಯೋಜನ ಪಡೆಯುತ್ತಿದ್ದು ಮತ್ತು ಪ್ರಾಥಮಿಕ ಮಟ್ಟದ ಅಕ್ಷರ ಲೆಕ್ಕಗಳ ತಿಳುವಳಿಕೆ ಇಲ್ಲದೆ, ಕೇವಲ ಕಾವ್ಯ-ಶಾಸ್ತ್ರ, ಪುರಾಣ ಗ್ರಂಥಗಳ ಪಠಣ ಮಾಡುವುದು. ಇಷ್ಟನ್ನು ಬಿಟ್ಟರೆ ಪ್ರಪಂಚದ ಆಗುಹೋಗುಗಳ, ಉಪಯುಕ್ತ ವಿಷಯಗಳ ಪರಿಜ್ಞಾನ ಇಲ್ಲದೆ ಹೋದುದ್ದು. ಹಾಗೂ ಮತ್ತೊಂದು ದೋಷವೆಂದರೆ ಉಪಾಧ್ಯಾಯರಿಗೆ

ಮೂಲಭೂತವಾದ ತರಬೇತಿಯಾಗಲಿ, ತಕ್ಕ ಯೋಗ್ಯತೆಯಾಗಲಿ ಇಲ್ಲದಿರುವುದು. ಮಕ್ಕಳಿಗೆ ಕಲಿಯಲು ಯಾವುದೇ ಬಗೆಯ ಪಠ್ಯಪುಸ್ತಕಗಳು ಇಲ್ಲದಿರುವುದು. ಇವುಗಳನ್ನು ಸುಧಾರಿಸುವ ದೃಷ್ಟಿಯನ್ನಿಟ್ಟುಕೊಂಡು ಕನ್ನಡ ಪ್ರದೇಶಗಳಲ್ಲಿ ಕಾರ್ಯ ಪ್ರವೃತರಾದ ಮೊದಲಿಗರೆಂದರೆ ಮುಂಬಯಿ ಪ್ರಾಂತ್ಯದ ಗವರ್ನರ ಎಲ್ಫಿನ್‌ಸ್ಟನ್.

ಎಲ್ಫಿನ್‌ಸ್ಟನ್ 1815 ರಲ್ಲಿ ಸ್ಥಾಪಿತವಾಗಿದ್ದ 'ಬಾಂಬೆ ಎಜುಕೇಷನ್ ಸೊಸೈಟಿ'ಯ ಕಾರ್ಯ ವ್ಯಾಪ್ತಿಯನ್ನು ವಿಸ್ತರಿಸಿ ಹೆಚ್ಚು ಶಾಲೆಗಳನ್ನು ಪ್ರಾರಂಭಿಸಬೇಕು ಮತ್ತು ದೇಶೀಯ ಭಾಷೆಗಳಲ್ಲಿ ಪುಸ್ತಕಗಳನ್ನು ಒದಗಿಸಬೇಕು ಎಂಬ ಸದುದ್ದೇಶದಿಂದ ಅಂಗಸಂಸ್ಥೆಯನ್ನು ತೆರೆದನು. ಅದೇ ಮುಂದೆ 'ಬಾಂಬೆ ನೇಟಿವ್ ಸ್ಕೂಲ್ ಆಂಡ್ ಬುಕ್ ಸೊಸೈಟಿ' ಎಂಬ ಹೆಸರಿನಿಂದ ಕೆಲಸ ಮಾಡಿತು. ಇವರು ಸಂಗ್ರಹಿಸಿದ ಕೆಲವು ಅಂದಿನ ಮಾಹಿತಿಗಳನ್ನು ಗಮನಿಸಿದಾಗ ಅಂದಿನ ಶೈಕ್ಷಣಿಕ ರಂಗದ ಕೆಲವು ಕಟು ಸತ್ಯಗಳು ಬೆಳಕಿಗೆ ಬರುತ್ತವೆ. ಆ ಕಾಲದಲ್ಲಿ ಮಕ್ಕಳು ದನ ಕಾಯುವಷ್ಟು ದೊಡ್ಡವರಾದರೆ ಸಾಕು, ರೈತನು ಶಾಲೆಯನ್ನು ಬಿಡಿಸುತ್ತಿದ್ದರು. ಇತ್ತ ವ್ಯಾಪಾರಿ ವರ್ಗದವರು ವಜಾಬಾಕಿ ಮಾಡಲು ತಿಳಿಯುವಂತಾದರೆ ಸಾಕು ಮಕ್ಕಳನ್ನು ಶಾಲೆ ಬಿಡಿಸಿ ಕುಲಕಸುಬಿಗೆ ಹಚ್ಚುವುದು ಸಾಮಾನ್ಯವಾಗಿತ್ತು. "ಇಡೀ ಜನಸಂಖ್ಯೆಯ ಪ್ರಮಾಣದಿಂದ ತೀರ ಕೆಲವು ಹುಡುಗರು ಮಾತ್ರ ಶಾಲೆಗೆ ಹೋಗುತ್ತಾರೆ. ಈ ಕೆಲವೇ ಮಕ್ಕಳಲ್ಲಿ ಕಲಿಯುವವರ ಸಂಖ್ಯೆ ತೀರ ಕಡಿಮೆ. ಶಿಕ್ಷಣದ ಶೋಚನೀಯ ಅವಸ್ಥೆಗೆ ಇವೆರಡೂ ದೊಡ್ಡ ನಿದರ್ಶನಗಳಾಗಿವೆ. ಇಲ್ಲಿನ ಜನರಿಗೆ ಶಿಕ್ಷಣ ಬೇಡವೆಂದೇನೂ ಅಲ್ಲ, ರೈತ ವರ್ಗಕ್ಕೆ ಬಡತನವೇ ಮುಖ್ಯ ಕಾರಣವಾಗಿತ್ತು. ರೈತನು ಶಾಲಾ ಶಿಕ್ಷಕರಿಗೆ ಫೀ ಕೊಡಬೇಕು ಎನ್ನುವ ಕಾರಣಕ್ಕೆ, ಚಿಕ್ಕ ವಯಸ್ಸಿನಲ್ಲಿಯೇ ಶಾಲೆ ಬಿಡಿಸಿ ತಮ್ಮ ಹೊಲದ ಕೆಲಸವನ್ನು ಹಚ್ಚುತ್ತಿದ್ದರು.

1824 ರಲ್ಲಿ ಮುಂಬಯಿ ಸರ್ಕಾರವು ಮುಂಬಯಿ ಇಲಾಖೆಯೊಳಗಿದ್ದ ದೇಶಿಯ ಶಾಲೆಗಳ ಮತ್ತು ಇವುಗಳನ್ನು ನಡೆಸುತ್ತಿದ್ದ ಶಿಕ್ಷಕರ ಗಣತಿಯನ್ನು ಮಾಡಿ ಮಾಹಿತಿ ಸಲ್ಲಿಸಬೇಕೆಂದು ಇಲಾಖೆಯೊಳಗಿನ ಎಲ್ಲಾ ಕಲೆಕ್ಟರ್‌ಗಳಿಗೆ ಆದೇಶವನ್ನು ನೀಡಿತು. ಆ ಆದೇಶದ ಮೇರೆಗೆ ಬೇರೆ ಬೇರೆ ಜಿಲ್ಲೆಗಳ ಕಲೆಕ್ಟರ್‌ಗಳು ಸಂಗ್ರಹಿಸಿದ ಮಾಹಿತಿಯ ಮುಖ್ಯಾಂಶ ಕ್ರೋಡೀಕರಿಸಿ, ಪುಣೆಯ ಪೊಲಿಟಿಕಲ್ ಎಜೆಂಟ್ರಾದ ವಿಲಿಯಮ್ ಚಾಪ್ಲಿನ್ ಎಂಬುವರು ದಿನಾಂಕ: 20–11–1825 ರಂದು ಸರ್ಕಾರಕ್ಕೆ ತಮ್ಮ ಮಾಹಿತಿಯನ್ನು ಸಲ್ಲಿಸಿದರು. ಅದರೊಳಗೆ ಧಾರವಾಡ ಜಿಲ್ಲೆಗೆ (ಸಭ್ಹೆ ) ಸಂಬಂಧಪಟ್ಟ (ಬಿಜಾಪೂರವು ಅಂದು ಧಾರವಾಡ ಜಿಲ್ಲಾಡಳಿತಕ್ಕೆ ಒಳಪಟ್ಟ ಭೀಮಾ ನದಿಯ ದಕ್ಷಿಣದ ಪ್ರದೇಶವಾಗಿತ್ತು ). ಬಿಜಾಪುರ ಜಿಲ್ಲೆಯು ಸೇರಿತ್ತು.

ಧಾರವಾಡ ಸಬ್ಹೆಯ ಮುಖ್ಯ ವಿಭಾಗದಲ್ಲಿ 12 ತಾಲೂಕು (ಕಿತ್ತೂರು ಪ್ರದೇಶವನ್ನು ಬಿಟ್ಟು ) ಗಳಲ್ಲಿ 1441 ಗ್ರಾಮಗಳು ಅವುಗಳಲ್ಲಿ 150 ಶಾಲೆಗಳಿರುವವು. 79 ಮರಾಠ (1313 ಬಾಲಕರು) 59 ಕನ್ನಡ (980 ಬಾಲಕರು), 7 ಎರಡು ಭಾಷೆಯವು ಮತ್ತು 5 ಪರ್ಷಿಯನ್ನ (55 ಬಾಲಕರು). ಒಟ್ಟು ಶಿಕ್ಷಕರಲ್ಲಿ ಹೆಚ್ಚಾಗಿ ಬ್ರಾಹ್ಮಣರು, ಲಿಂಗಾಯತರು 67 ಇದ್ದರು. ಒಟ್ಟು 2348 ವಿದ್ಯಾರ್ಥಿಗಳಲ್ಲಿ, ಲಿಂಗಾಯತರು 1164, ಬ್ರಾಹ್ಮಣರು 694, ಪಂಚಾಳರು 64, ಮುಸಲ್ಮಾನರು 99, ನೇಕಾರರು 61, ಜೈನರು 48, ಮರಾಠರು 65 ಮತ್ತು ಇನ್ನಿತರರು ಇರುವರು. ಈ ಪ್ರದೇಶದ ಮಕ್ಕಳಲ್ಲಿ ಕಲಿತವರು ಹಾಗೂ ಕಲಿಯದಿದ್ದವರ ಪ್ರಮಾಣ 1:154 ಇರುವುದು. ಭೀಮಾನದಿಯ ದಕ್ಷಿಣ ತಾಲೂಕುಗಳ ವಿಭಾಗದಲ್ಲಿ 89 ಶಾಲೆಗಳು (1049 ಬಾಲಕರು) ಮತ್ತು ರಾಣೆಬೆನ್ನೂರು ವಿಭಾಗದಲ್ಲಿ 34 ಶಾಲೆಗಳು (541 ಬಾಲಕರು) ಇದ್ದವು. ವೇದ ಮತ್ತು ಶಾಸ್ತ್ರಗಳಲ್ಲಿ ಬ್ರಾಹ್ಮಣರು ತಾವೇ ಶಿಕ್ಷಣ ಕೊಡುವರು. ಅದು ಉಚಿತವಾಗಿರುವುದು.

ಮೇಲೆ ಹೇಳಿದ ಒಟ್ಟು ವಿದ್ಯಾರ್ಥಿಗಳಲ್ಲಿ 1390 ಮಕ್ಕಳು ಧೋಳಾಕ್ಷರಗಳನ್ನು ಬರೆಯುವುದು, ಓದುವುದು ಮಾಡುತ್ತಿದ್ದರು. ಮುಖ್ಯ ವಿಭಾಗದಲ್ಲಿ ವಿದ್ಯಾರ್ಥಿಗಳು ಜೈಮಿನಿ, ಅಮರಕೋಶ, ವಿದುರನೀತಿ ಮತ್ತು ಸೊಮೇಶ್ವರ ಶತಕ ಇವುಗಳನ್ನು ಓದುತ್ತಿದ್ದರು.

1835ರಲ್ಲಿ ಮುಂಬಯಿ ಸರ್ಕಾರವು 'ಸದರ್ನ್ ಮರಾಠ' (ಮುಂಬೈ ಕರ್ನಾಟಕ) ಪ್ರದೇಶದ ಜನರ ಭಾಷೆ ಕನ್ನಡ ಆದ್ದರಿಂದ ಕನ್ನಡದಲ್ಲಿಯೇ ಆಡಳಿತ ಮತ್ತು ಶಿಕ್ಷಣ ಕಾರ್ಯ ನಡೆಯಬೇಕೆಂಬ ಮಹತ್ವದ ನಿರ್ಣಯವನ್ನು ಕೈಗೊಂಡಿತು. ಆದರೂ ಕೂಡ ಈ ಭಾಗದಲ್ಲಿ ಭಾಷಾ ದ್ವಂದ್ವತೆಯು ಮುಂದುವರೆದಿದ್ದು ಕಾಣಬಹುದು, ಏಕೆಂದರೆ ಇಲ್ಲಿ ಮರಾಠಿ, ಕನ್ನಡ, ಉರ್ದು, ಪರ್ಷಿಯನ್ ಮುಂತಾದ ಭಾಷೆಗಳನ್ನಾಡುವ ಜನರನ್ನು ಕಾಣುತ್ತೇವೆ. ಬ್ರಿಟೀಷರ ಆರಂಭದ ಆಡಳಿತದ ಸಂದರ್ಭದಲ್ಲಿ ಶಾಲೆಗಳ ಸಂಖ್ಯೆ, ಮಕ್ಕಳ ಸಂಖ್ಯೆ, ಪಠ್ಯಪುಸ್ತಕ ಮತ್ತು ಶಿಕ್ಷಣಕ್ರಮ ಮತ್ತು ಶಿಕ್ಷಕರ ತರಬೇತಿಗಳ ಬಗ್ಗೆ ಸರಿಯಾದ ಅಂಕಿ ಸಂಖ್ಯೆಗಳು ಸಾಕಷ್ಟು ಲಭ್ಯವಿಲ್ಲ. ಕ್ರಿ. ಶ. 1835ರ ಮೆಕಾಲೆ ವರದಿಯ ನಂತರ ಆಡಳಿತದ ಕೇಂದ್ರೀಕರಣ, ಶಿಕ್ಷಣದ ಧೋರಣೆಗಳು ಮತ್ತು ಈ ಅವಧಿಯಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ಪ್ರಾಥಮಿಕ, ಮಾಧ್ಯಮಿಕ ಶಿಕ್ಷಣ ಬೆಳವಣಿಗೆ ಜೊತೆಗೆ ಉಚ್ಚ ಶಿಕ್ಷಣಕ್ಕಾಗಿ ವಿಶ್ವವಿದ್ಯಾಲಯಗಳ ಪ್ರಾರಂಭವನ್ನು ಕಾಣಬಹುದು. ಮತ್ತು ಮೆಕಾಲೆ ವರದಿಯ ನಂತರವೇ ಆಧುನಿಕ ಶಿಕ್ಷಣ ಪ್ರಾರಂಭವಾಯಿತೆಂದು ಹೇಳಿದರೆ ತಪ್ಪಾಗಲಾರದು. ಹೆಚ್ಚು ಹೆಚ್ಚು ಕನ್ನಡ ಶಾಲೆಗಳ ಪ್ರಾರಂಭದ ಜೊತೆಗೆ ಮಿಷನರಿ ಶಾಲೆಗಳು ಭದ್ರವಾದ ತಳಹದಿ ಹಾಕಿದ್ದು, ಸ್ತ್ರೀ ಶಿಕ್ಷಣಕ್ಕಾಗಿ ಪ್ರತ್ಯೇಕ ಶಾಲೆಗಳು ಹಾಗೂ ಉರ್ದು ಶಾಲೆಗಳ ಪ್ರಾರಂಭ ಮತ್ತು ಇಂಗ್ಲೀಷ್ ಶಿಕ್ಷಣಕ್ಕೆ ಆದ್ಯತೆ ನೀಡಲು ಪ್ರಾರಂಭಿಸಿದ್ದು ಇದೇ ಕಾಲದಲ್ಲಿ ಎಂದು ಹೇಳಬಹುದು. ಮೇ 1854ರ ವುಡ್ಸ್ ಡಿಸ್ಪ್ಯಾಚ್ ವರದಿ ಶಿಕ್ಷಣ ಕೇತ್ರಕ್ಕೆ ಭದ್ರಬುನಾದಿ ಹಾಕಿದ ಕಾಲ, ಕನ್ನಡ ಭಾಷಾಭಿವೃದ್ಧಿಗಾಗಿ ಮಿ. ವಿಲಿಯಮ್ ರಸೆಲ್, ಡೆಪ್ಯೂಟಿ ಚನ್ನಬಸಪ್ಪ ಮುಂತಾದವರ ಪರಿಶ್ರಮದ ಫಲವಾಗಿ ಆಡಳಿತದಲ್ಲಿ ಸ್ಥಳೀಯ ಮರಾಠಿ ಭಾಷೆಗೆ ಬದಲಾಗಿ ಕ್ರಮೇಣ ಕನ್ನಡ ಭಾಷೆಗೆ ಆದ್ಯತೆ ನೀಡಿ ಮುಂದಿನ ಶಿಕ್ಷಣದ ಬೆಳವಣಿಗೆಗೆ ಹಾಕಿದ ದಿಕ್ಸೂಚಿಯ ಕಾಲವಾಗಿದೆ.

19ನೇ ಶತಮಾನದ ಪ್ರಾರಂಭದಲ್ಲಿ ಕ್ರೈಸ್ತ ಧಾರ್ಮಿಕ ಸಂಸ್ಥೆಗಳಿಂದ ಹಾಗೂ ಸರ್ಕಾರದಿಂದ ಸ್ಥಾಪಿಸಲ್ಪಟ್ಟ ಶಾಲೆಗಳಿಂದಾಗಿ ಹಳೇ ಸಂಪ್ರದಾಯದ ಶಾಲೆಗಳು ತಮ್ಮ ಪ್ರಾಮುಖ್ಯವನ್ನು ಕಳೆದುಕೊಂಡವು. ಅಲ್ಲದೆ ಹೊಸ ಮಾದರಿಯ ಇಂಗ್ಲೀಷ್ ಶಾಲೆಗಳಿಗೆ ಹೆಚ್ಚು ಹೆಚ್ಚು ಬೇಡಿಕೆ–ಪ್ರೋತ್ಸಾಹ ಕಂಡುಬಂದಿತು. ಈ ಹೊಸ ಶಾಲೆಗಳಲ್ಲಿ ಸಂಪೂರ್ಣವಾಗಿ ಎಲ್ಲಾ ಕೋಮಿನ ಉಪಾಧ್ಯಾಯರುಗಳನ್ನು ನೇಮಕ ಮಾಡಲಾಗುತ್ತಿತ್ತು. 'ಬಾಂಬೆ ನೇಟಿವ್ ಸ್ಕೂಲ್ ಆಂಡ್ ಬುಕ್ ಸೊಸೈಟಿ' ಯು ಮುಂಬಯಿ ಪ್ರಾಂತ್ಯದ ಎಲ್ಲಾ ತಾಲೂಕು ಸ್ಥಳಗಳಲ್ಲಿ ಮತ್ತು ದೊಡ್ಡ ಗ್ರಾಮಗಳಲ್ಲಿ ಕನ್ನಡ ಶಾಲೆಗಳ ಸ್ಥಾಪನೆಯ ಕಾರ್ಯವು ಮುಂದುವರೆಸಿತು. ಕ್ರಿ. ಶ. 1840ರಲ್ಲಿ 'ಬಾಂಬೆ ನೇಟಿವ್ ಸ್ಕೂಲ್ ಅಂಡ್ ಬುಕ್ ಸೊಸೈಟಿ' ಯನ್ನು ರದ್ದುಗೊಳಿಸಿ ಇಲಾಖೆಯೊಳಗಿನ ಶಾಲೆಗಳ ಆಡಳಿತಕ್ಕಾಗಿ 'ಬಾಂಬೆ ಬೋರ್ಡ ಆಫ್ ಎಜುಕೇಷನ್ ಸೊಸೈಟಿ' ಎಂಬ ಸಂಸ್ಥೆಯನ್ನು ಸ್ಥಾಪಿಸಲಾಯಿತು. ಈ ಸಂಸ್ಥೆಯು ಕ್ರಿ. ಶ. 1855 ರವರೆಗೆ ಕಾರ್ಯವನ್ನು ನಿರ್ವಹಿಸಿತು. Sir Erskine Perry ಎಂಬುವರು ಅದರ ಅಧ್ಯಕ್ಷರಾಗಿ ಕ್ರಿ. ಶ. 1852 ರವರೆಗೆ ಅಧಿಕಾರದಲ್ಲಿದ್ದರು. 'ಬಾಂಬೆ ಬೋರ್ಡ ಆಫ್ ಎಜುಕೇಷನ್ ಸೊಸೈಟಿ' ಕಾಲದಲ್ಲಿ 1840 ರಿಂದ 1855 ರವರೆಗೆ ಧಾರವಾಡ ಮತ್ತು ಬೆಳಗಾಂ ಜಿಲ್ಲೆಗಳಲ್ಲಿ ಸ್ಥಾಪನೆಯಾದ ಶಾಲೆಗಳ ವಿವರ ಈ ಕೆಳಗಿನಂತಿದೆ. ಈ ಕಾಲದಲ್ಲಿ ಬಿಜಾಪುರ ಪ್ರದೇಶವು ಸೋಲ್ಲಾಪುರ ಜಿಲ್ಲೆಗೆ ಸೇರಲ್ಪಟ್ಟಿತ್ತು.

ಸೋಲ್ಲಾಪುರದ ಕನ್ನಡ ಪ್ರದೇಶ (10 ಶಾಲೆಗಳು): ಚಡಚಣ, ಮನಗೂಳಿ, ಬಾಗೇವಾಡಿ, ಮುದ್ದೇಬಿಹಾಳ ದೇವರ ಹಿಪ್ಪರಗಿ, ಸಿಂದಗಿ, ಆಲಮೇಲ, ಇಂಡಿ, ತಾಳಿಕೋಟೆ, ವಿಜಾಪುರ ಒಟ್ಟು ಶಾಲೆಗಳು: 34 ವಿದ್ಯಾರ್ಥಿಗಳ ಸಂಖ್ಯೆ: 414 'ಬಾಂಬೆ ಬೋರ್ಡ ಆಫ್ ಎಜುಕೇಷನ್' ವರದಿ (1854–55). ಹೀಗೆ ಶಾಲೆಗಳ ಬೆಳವಣಿಗೆ ಮುಂದುವರೆದಿದ್ದರೂ ಶಾಲೆಯಲ್ಲಿ ಬೋಧಿಸುವ ಶಿಕ್ಷಣ ಮಾಧ್ಯಮ (ಭಾಷೆ)ದಲ್ಲಿ ತಾರತಮ್ಯವು ಕೂಡಾ ಹಾಗೇ ಮುಂದುವರೆಯಿತು. ಏಕೆಂದರೆ ಹಿಂದಿನ ರಾಜ ಭಾಷೆಯಾದ ಮರಾಠಿಯ ಪ್ರಭಾವವು ಅಷ್ಟು ಪ್ರಬಲವಾಗಿತ್ತು.

ಕ್ರಿಶ. 1880ರಲ್ಲಿ 'ಬಾಂಬೆ ಬೋರ್ಡ್ ಆಫ್ ಎಜುಕೇಷನ್ ಸೊಸೈಟಿಯು ಇಡೀ ಮುಂಬಯಿ ಪ್ರಾಂತ್ಯವನ್ನು ಮೂರು ಭಾಗಗಳನ್ನಾಗಿ ಮಾಡಿ ಪ್ರತಿಯೊಂದು ಭಾಗಕ್ಕೆ ಒಬ್ಬ ಶಿಕ್ಷಣಾಧಿಕಾರಿಯನ್ನು ನೇಮಿಸಿ, ತನ್ನ ಆಡಳಿತವನ್ನು ನಡೆಸುತ್ತಿತ್ತು. ದೊಡ್ಡ ಗ್ರಾಮಗಳಲ್ಲಿ ಬೋರ್ಡಿನವರೇ ಶಾಲೆಗಳನ್ನು ತೆರೆದು ಪ್ರತಿಯೊಬ್ಬ ವಿದ್ಯಾರ್ಥಿಯಿಂದ ಒಂದಾಣೆ ಶುಲ್ಕವನ್ನು ಪಡೆಯುತ್ತಿದ್ದರು. ಓದು ಬರಹ ಗಣಿತ ವಿಷಯಗಳಲ್ಲಿ ಸಾಮಾನ್ಯ ಜ್ಞಾನದ ಪಾಠಗಳನ್ನು ಕಲಿಸುತ್ತಿದ್ದರು. ಅಚ್ಚು ಹಾಕಿದ ಪುಸ್ತಕಗಳನ್ನು ಉಪಯೋಗಿಸುತ್ತಿದ್ದರು. ವಾರ್ಷಿಕ ಪರೀಕ್ಷೆಗಳನ್ನು ನಡೆಸಿ ಮುಲ್ಕಿ ತರಗತಿಯಲ್ಲಿ ಪಾಸ್ ಆದ ವಿದ್ಯಾರ್ಥಿಗಳಿಗೆ ಪಾರಿತೋಷಕಗಳನ್ನು ಕೊಡುತ್ತಿದ್ದರು. ಮತ್ತು ಒಳ್ಳೆಯ ಶಿಕ್ಷಕರಿಗೆ ಮನ್ನಣೆ, ಪುರಸ್ಕಾರಗಳನ್ನು ಕೊಡುತ್ತಿದ್ದರು. ಹಾಗೆಯೇ ಸ್ಥಳೀಯ ಜನರು ಮುಂದೆ ಬಂದು ತಮ್ಮ ಗ್ರಾಮಗಳಲ್ಲಿ ತಾವೇ ಶಾಲೆ ತೆರೆಯಲು ಮುಂದಾದರೆ ಅವರಿಗೆ ಸಹಾಯ ಧನವನ್ನು ಕೊಡುತ್ತಿದ್ದರು. ಅದಕ್ಕಾಗಿ 'ಅಂತಿಕ ಸ್ವಾವಲಂಬನ ಪದ್ಧತಿ' ಎಂಬ ಸಹಾಯಧನ ಪದ್ಧತಿಯನ್ನು ಜಾರಿಗೆ ತಂದರು. ಕ್ರಿ. ಶ. 1854 ರ ಪೂರ್ವದಲ್ಲಿ ಜಿಲ್ಲೆಯಲ್ಲಿ ಆಯ್ಯನವರ ಶಾಲೆಗಳು, ಮಿಷನರಿ ಶಾಲೆಗಳು, ಸರ್ಕಾರಿ ಶಾಲೆಗಳು ಕೆಲಸಮಾಡುತ್ತಿದ್ದವು. ಅವುಗಳು ಪ್ರಾಥಮಿಕ ಹಾಗೂ ಮಾಧ್ಯಮಿಕ ಶಾಲೆಗಳನ್ನು ಮಾತ್ರ ಹೊಂದಿದ್ದವು ಆದರೆ ಕಾಲೇಜುಗಳನ್ನು ಹೊಂದಿರಲಿಲ್ಲ. ಉಚ್ಚ ಶಿಕ್ಷಣಕ್ಕಾಗಿ ವಿದ್ಯಾರ್ಥಿಗಳು ಪುಣೆ, ಮುಂಬೈಗೆ ಹೋಗುತ್ತಿದ್ದರು. ಭಾರತದಲ್ಲಿ ಬ್ರಿಟೀಷ್ ಶಿಕ್ಷಣದಲ್ಲಿ ಕಂಡು ಬರುವ ಲೋಪದೋಷಗಳನ್ನು ಹೋಗಲಾಡಿಸಲು ವ್ಯವಸ್ಥಿತವಾದ ಮೂರ್ತ ಸ್ವರೂಪವನ್ನು ತಂದು ಕೊಡಲು ಕಾರಣವಾದ ಬೋರ್ಡ್ ಆಫ್ ಕಂಟ್ರೋಲರ್ ನಿರ್ದೇಶನದ ಮೇರೆಗೆ ಗವರ್ನರ್ ಜನರಲ್ ಲಾರ್ಡ ಡಾಲಹೌಸಿ ಜಾರಿಗೆ ತಂದ Wood's Education Dispatch (1854) ಇದು ಭಾರತೀಯ ಉನ್ನತ ಶಿಕ್ಷಣಕ್ಕೆ ಭದ್ರವಾದ ಬುನಾದಿ ಹಾಕಿತು. ಇದು ಭಾರತದಲ್ಲಿ ಇಂಗ್ಲೀಷ್ ಶಿಕ್ಷಣ ಮತ್ತು ಮಹಿಳಾ ಶಿಕ್ಷಣಕ್ಕೆ ಹೆಚ್ಚಿನ ಮಹತ್ವವನ್ನು ನೀಡಿತು. ಇದರ ನಿರ್ದೇಶನದ ಪರಿಣಾಮವಾಗಿ ಎರಡು ಮಹತ್ವದ ಸರ್ಕಾರಿ ಸಂಸ್ಥೆಗಳು ಮುಂಬಯಿ ಇಲಾಖೆಯಲ್ಲಿ ಸ್ಥಾಪಿಸಲ್ಪಟ್ಟವು.

**ಚಾರ್ಲ್ಸ್‌ವುಡ್ ವರದಿ**

**ಆಯೋಗದ ಶಿಫಾರಸುಗಳು**

1. ಶಿಕ್ಷಣದ ಎಲ್ಲ ಹಂತಗಳಲ್ಲಿ ಬೆಳವಣಿಗೆ ಅವಶ್ಯಕತೆ ಇದ್ದರೂ ಜನ ಸಾಮಾನ್ಯರ ಶಿಕ್ಷಣಕ್ಕೆ ವಿಶೇಷ ಗಮನ ಕೊಡಬೇಕು.
2. ಭಾರತೀಯ ಶಿಕ್ಷಣದ ಗುರಿ "ಯುರೋಪಿಯನ್ ಜ್ಞಾನ, ವಿಜ್ಞಾನ, ಕಲೆಗಳನ್ನು" ಪ್ರಸಾರ ಮಾಡುವದೇ ಆಗಿದೆ.
3. ಪ್ರತಿಯೊಂದು ಪ್ರಾಂತದಲ್ಲಿ ಒಂದು ವಿದ್ಯಾ ಇಲಾಖೆಯನ್ನು ಸ್ಥಾಪಿಸಬೇಕು.

4. ಮುಂಬೈ, ಮದ್ರಾಸ ಹಾಗು ಕೊಲ್ಕತ್ತಾ ನಗರಗಳಲ್ಲಿ ಒಂದೊಂದು ವಿಶ್ವವಿದ್ಯಾಲಯ ಸ್ಥಾಪಿಸಬೇಕು.
5. ಶಿಕ್ಷಣ ರಂಗದಲ್ಲಿ ಸರಕಾರದ ಜೊತೆಗೆ ಖಾಸಗಿ ಸಂಸ್ಥೆಗಳೂ ಪಾತ್ರ ವಹಿಸಬೇಕು. ಅವರಿಗಾಗಿ ಒಂದು "ಸಹಾಯಧನ ಪದ್ಧತಿಯನ್ನು" ಜಾರಿಯಲ್ಲಿ ತರಬೇಕು.
6. ಹಿಂದುಳಿದ ಪ್ರದೇಶಗಳಲ್ಲಿ ಸರಕಾರವೇ ಮುಂದೆ ಬಂದು ಶಾಲೆಗಳನ್ನು ತೆರೆಯಬೇಕು. ಮಾಧ್ಯಮಿಕ ಹಾಗು ಉಚ್ಚ ಶಿಕ್ಷಣ ಕ್ಷೇತ್ರದಿಂದ ಕ್ರಮೇಣ ಸರಕಾರವು ಹಿಂದೆ ಸರಿಯಬೇಕು.
7. ಧಾರ್ಮಿಕ ಶಿಕ್ಷಣದಲ್ಲಿ ಸರಕಾರವು ಕೈ ಹಾಕಬಾರದು. ಸಹಾಯ ಧನವನ್ನು ಸಾಮಾನ್ಯ ಶಿಕ್ಷಣಕ್ಕೆ ಕೊಡಬೇಕು.
8. ದೇಶೀ ಶಾಲೆಗಳಿಗೆ ಪ್ರೋತ್ಸಾಹ ನೀಡಿ, ಅವು ಸರಕಾರದ ಆಡಳಿತಕ್ಕೆ ಒಳಪಡುವಂತೆ ಮಾಡಬೇಕು.

ಮೊದಲನೆಯದು: Department of Public Instruction (ಸಾರ್ವಜನಿಕ ಶಿಕ್ಷಣ ಇಲಾಖೆ) ಇದು ಪ್ರಾಥಮಿಕ ಹಾಗೂ ಹೈಸ್ಕೂಲ್ಗಳ ಆಡಳಿತಕ್ಕಾಗಿ, ಎರಡನೆಯದು ಮುಂಬಯಿ ವಿಶ್ವವಿದ್ಯಾಲಯ ಸ್ಥಾಪನೆ (1857) ಇದು ಉಚ್ಚ ಶಿಕ್ಷಣದ ಸಂಘಟನೆಗಾಗಿ. ಮೇ 1855ರಲ್ಲಿ ಏರ್ಪಟ್ಟ 'ಸಾರ್ವಜನಿಕ ಶಿಕ್ಷಣ ಇಲಾಖೆ' ಯ ಅಧಿಕಾರ ವ್ಯಾಪ್ತಿಯನ್ನು ನಾಲ್ಕು ಭಾಗಗಳಲ್ಲಿ ವಿಸ್ತರಿಸಲಾಯಿತು. ಸಿಂಧ್, ಗುಜರಾತ್, ಪ್ರೆಸಿಡೆನ್ಸಿ ಡಿವಿಜನ್ (ಮುಂಬಯಿ) ಮತ್ತು ಡೆಕ್ಕನ್ ಭಾಗಗಳಲ್ಲಿ (Division) ಮುಖ್ಯಾಧಿಕಾರಿಯಾಗಿ ಎಜುಕೇಷನ್ ಇನ್ಸ್‌ಪೆಕ್ಟರ್‌ರು ಮತ್ತು ಅವರ ಡೆಪ್ಯೂಟಿ ಇನ್ಸ್‌ಪೆಕ್ಟರ್‌ರನ್ನು ನೇಮಿಸಲಾಯಿತು. ಆ ವೇಳೆಗೆ ಮುಂಬಯಿ ಪ್ರಾಂತ್ಯದ ಕನ್ನಡ ಪ್ರದೇಶವಾದ ಧಾರವಾಡ-ಬೆಳಗಾಂ ಜಿಲ್ಲೆಗಳಿಗೆ ಎಫ್. ಪಿ. ಬೇಕರ್ ಎಂಬುವರು ಡೆಪ್ಯೂಟಿ ಇನ್ಸ್‌ಪೆಕ್ಟರ್ ನೇಮಕವಾಗಿ ಬಂದರು. ಇವರು ಕ್ರಿ. ಶ. 1862 ರವರೆಗೆ ಈ ಸಬ್ಡೆಯ ಆಡಳಿತವನ್ನು ನೋಡಿಕೊಂಡರು.

ಕ್ರಿ. ಶ. 1855-56ರಲ್ಲಿ ಬಿಜಾಪುರ ಜಿಲ್ಲೆಯಲ್ಲಿ ಒಟ್ಟು 9 ಶಾಲೆಗಳಿದ್ದವು. ಅವುಗಳಲ್ಲಿ 8 ಮಾತೃಭಾಷೆ ಶಾಲೆಗಳು ಒಂದು ಇಂಗ್ಲೀಷ್ ಮಾಧ್ಯಮ ಶಾಲೆ ಇವುಗಳಲ್ಲಿ ಒಟ್ಟು 395 ವಿದ್ಯಾರ್ಥಿಗಳು ಇದ್ದು ಸರಾಸರಿ ಹಾಜರಾತಿ 305 ಇರುತ್ತಿತ್ತು. ಹಾಗೆಯೇ 1865-66ರಲ್ಲಿ ಶಾಲೆಗಳ ಸಂಖ್ಯೆ 46ಕ್ಕೆ ಹೆಚ್ಚಳಗೊಂಡವು. ಜೊತೆಗೆ ಮಕ್ಕಳ ಸಂಖ್ಯೆ ಕೂಡ ಹೆಚ್ಚಳ (2877) ಆಗಿರುವುದು ಕಂಡು ಬರುತ್ತದೆ. ಮತ್ತು 1875-76ರಲ್ಲಿ 130 ಶಾಲೆಗಳು ಜಿಲ್ಲೆಯಲ್ಲಿ ಕಂಡು ಬರುತ್ತವೆ. ಅವುಗಳಲ್ಲಿ 6119 ವಿದ್ಯಾರ್ಥಿಗಳು ದಾಖಲಾಗಿದ್ದರೆ, ಸರಾಸರಿ ಹಾಜರಾತಿ ಸಂಖ್ಯೆ: 4791 ಇರುವುದು ಕಂಡು ಬರುತ್ತದೆ. 30 ಶಾಲೆಗಳಲ್ಲಿ ಎರಡು ಆಂಗ್ಲ ಮಾಧ್ಯಮ ಬಾಲಕರ ಶಾಲೆ, 10 ಬಾಲಕಿಯರ ಶಾಲೆ ಇರುವುದು ಕಂಡುಬರುತ್ತದೆ.

1921 ರಲ್ಲಿ ಬಿಜಾಪುರ ಜಿಲ್ಲೆಯಲ್ಲಿ 569 ಶಿಕ್ಷಣ ಸಂಸ್ಥೆಗಳು ಮತ್ತು 34, 869 ವಿದ್ಯಾರ್ಥಿಗಳು ಕಂಡುಬರುತ್ತಾರೆ. 1944ರ ನಂತರದಲ್ಲಿ ಪದವಿ ಕಾಲೇಜುಗಳು ಮತ್ತು ಇತರ ವಿದ್ಯಾಲಯಗಳು ಈ ಜಿಲ್ಲೆಗೆ ಕಂಡುಬರುತ್ತವೆ. ಇಲ್ಲಿಯವರೆಗೂ ಉನ್ನತ ಶಿಕ್ಷಣ ಪಡೆಯಲು ಪುನಾ ಮುಂಬೈ ನಂತಹ ನಗರಗಳನ್ನೇ ಅವಲಂಬಿಸಿದ್ದರು. ಇದು ಎಲ್ಲ ಜನರಿಗೆ ಸಾಧ್ಯವಾಗುತ್ತಿರಲಿಲ್ಲ.

ಈ ಎಲ್ಲಾ ಶಾಲೆಗಳಲ್ಲಿ ಸಮಾಜದ ಎಲ್ಲಾ ವರ್ಗದ ಜನರಿಗೂ ಶಿಕ್ಷಣವನ್ನು ಕಲಿಯಲು ಮುಕ್ತ ಅವಕಾಶವಿತ್ತು, ಆದರೆ ಮೊದಮೊದಲು ಸಾರ್ವಜನಿಕ ಶಾಲೆಗಳಿಗೆ

ಹಿಂದುಳಿದ ಜನಾಂಗಗಳ ಮಕ್ಕಳನ್ನು ಸೇರಿಸಲು ಪ್ರತಿಬಂಧಕವಿತ್ತಾದರೂ ಕ್ರಮೇಣ ಆ ಭಾವನೆ ಶಿಥಿಲವಾಯಿತು. ಇದು ಶಿಕ್ಷಣದಲ್ಲಿ ಹಿಂದುಳಿದ ವರ್ಗಗಳಿಗೆ ಶಿಕ್ಷಿತರಾಗಲು ಅನುಕೂಲವಾಯಿತು.

ಬಿಜಾಪುರ ಜಿಲ್ಲೆಯಲ್ಲಿ 1900ರ ವೇಳೆಗೆ ಒಟ್ಟು 207 ಪ್ರಾಥಮಿಕ ಶಾಲೆಗಳು (194 ಕನ್ನಡ ಗಂಡು ಮಕ್ಕಳ ಶಾಲೆ, 07 ಕನ್ನಡ ಹೆಣ್ಣು ಮಕ್ಕಳ ಶಾಲೆ, 09 ಉರ್ದು ಮತ್ತು 10 ಮರಾಠಿ ಶಾಲೆ) ಕಾರ್ಯನಿರ್ವಹಿಸುತ್ತಿದ್ದವು. 1910ರ ವೇಳೆಗೆ 342ಕ್ಕೆ ಹೆಚ್ಚಳಗೊಂಡವು. ಒಂದು ದಶಕದ ಅವಧಿಯಲ್ಲಿ 135 ಹೊಸ ಶಾಲೆಗಳು ಶೈಕ್ಷಣಿಕವಾಗಿ ಹಿಂದುಳಿದ ಪ್ರದೇಶಗಳಲ್ಲಿ ಪ್ರಾರಂಭವಾಗಿರುವುದು ತಿಳಿದು ಬರುತ್ತದೆ.

ಮುಂಬಯಿ ಸರ್ಕಾರವು 1918ರಲ್ಲಿ ಪ್ರಾಥಮಿಕ ವಿದ್ಯಾಭ್ಯಾಸದ ಕಾನೂನನ್ನು ಜಾರಿಗೆ ತಂದಿತು. ಇದರ ಪ್ರಕಾರ ಕೆಲವು ಕ್ಷೇತ್ರಗಳಲ್ಲಿ ಕಡ್ಡಾಯ ಶಿಕ್ಷಣವನ್ನು ಜಾರಿಗೆ ತರಲಾಯಿತು. ಇದು ವಿದ್ಯಾಭ್ಯಾಸದ ತೀವ್ರತರ ಬೆಳವಣಿಗೆಗೆ ಕಾರಣವಾಯಿತು. 1930ರ ಒಂದು ವರದಿ ಪ್ರಕಾರ ಪ್ರತಿಯೊಬ್ಬ ವಿದ್ಯಾರ್ಥಿಗೆ ಪ್ರಾಥಮಿಕ ಶಿಕ್ಷಣಕ್ಕಾಗಿ ಸರ್ಕಾರವು ಖರ್ಚು ಮಾಡುತಿದ್ದ ವೆಚ್ಚ ಹೀಗಿದೆ. ಬಂಗಾಳ ಸರ್ಕಾರವು ರೂ. 1–50, ಮದ್ರಾಸ್ ಸರ್ಕಾರವು ರೂ. 4–90, ಮುಂಬಯಿ ಸರ್ಕಾರವು ರೂ. 11–11 ಪೈಸೆ ಖರ್ಚು ಮಾಡುತ್ತಿತ್ತು. ಈ ಮೇಲಿನ ದಾಖಲೆಗಳನ್ನು ನೋಡಿದರೆ ದೇಶದ ಬೇರೆ ಬೇರೆ ಪ್ರಾಂತ್ಯಗಳಲ್ಲಿಯೇ ಮುಂಬಯಿ ಸರ್ಕಾರವು ಆ ಕಾಲಕ್ಕೆ ಅಧಿಕ ಹಣ ಖರ್ಚು ಮಾಡುವ ಮೂಲಕ ತನ್ನ ಶಿಕ್ಷಣದ ಧೋರಣೆಯನ್ನು ಮುಂದುವರೆಸಿತ್ತು ಎಂಬುದು ಮನಗಾಣಬಹುದು.

ಶಿಕ್ಷಣ ಮಾಧ್ಯಮವು1938ರ ವರೆಗೆ ಹೈಸ್ಕೂಲ್ಗಳಲ್ಲಿ ಇಂಗ್ಲೀಷ್ ಮಾಧ್ಯಮ ಹೊಂದಿದ್ದು, 1939ರ ನಂತರ ಪ್ರಾಂತೀಯ ಭಾಷೆಗಳನ್ನು ಶಿಕ್ಷಣ ಮಾಧ್ಯಮವಾಗಿ ಬಳಸಲಾಯಿತು. ಇದೇ ಅವಧಿಯಲ್ಲಿ ಎಸ್. ಎಸ್. ಎಲ್. ಸಿ ಪರೀಕ್ಷಾ ಮಂಡಳಿ ಸ್ಥಾಪನೆಯಾಯಿತು. ಮೊದಲು ವಿಶ್ವವಿದ್ಯಾಲಯದ ಅಧೀನದಲ್ಲಿದ್ದ ಪ್ರೌಢ ಶಾಲೆಗಳನ್ನು ಎಸ್. ಎಸ್. ಎಲ್. ಸಿ. ಪರೀಕ್ಷಾ ಮಂಡಳಿಯ ಅಧೀನಕ್ಕೆ ನೀಡಲಾಯಿತು.

1857ರಲ್ಲಿ ಆರಂಭವಾದ ಮುಂಬಯಿ ವಿಶ್ವವಿದ್ಯಾಲಯವು ಬೇರೆ ಬೇರೆ ಪ್ರಾದೇಶಿಕ ವಿಶ್ವವಿದ್ಯಾನಿಲಯಗಳು ಆರಂಭವಾಗುವವರೆಗೂ ಈ ಭಾಗದಲ್ಲಿ ಸ್ಥಾಪನೆಯಾದ ಎಲ್ಲಾ ಕಾಲೇಜುಗಳು 1949 ಪೂರ್ವದಲ್ಲಿ ಮುಂಬಯಿ ವಿಶ್ವವಿದ್ಯಾಲಯದ ಆಡಳಿತ ವ್ಯಾಪ್ತಿಗೆ ಒಳಪಟ್ಟಿದ್ದವು. ಅವುಗಳೆಂದರೆ:

- ಶ್ರೀ ಬಸವೇಶ್ವರ ಕಾಲೇಜು, ಬಾಗಲಕೋಟೆ 1944 ವಿದ್ಯಾರ್ಥಿಗಳು 220
- ವಿಜಯ ಕಾಲೇಜು, ಬಿಜಾಪುರ 1945 ವಿದ್ಯಾರ್ಥಿಗಳು 85
- ಸರ್ಕಾರಿ ಶಿಕ್ಷಣ ಕಾಲೇಜು 1945

ಈ ಮೇಲಿನ ಕಾಲೇಜುಗಳ ಸ್ಥಾಪನೆಯಿಂದ ಈ ಭಾಗದ ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣಕ್ಕಾಗಿ ಪುಣೆ ಮತ್ತು ಮುಂಬಯಿಗೆ ಹೋಗುವುದನ್ನು ಕಡಿಮೆಗೊಳಿಸಿತು. ಮತ್ತು ನಗರದ ಶ್ರೀಮಂತ ವರ್ಗ ಮಾತ್ರವಲ್ಲದೆ ಗ್ರಾಮೀಣ ಭಾಗದ ಮಧ್ಯಮ ವರ್ಗದ ವಿದ್ಯಾರ್ಥಿಗಳಿಗೂ ಉನ್ನತ ಶಿಕ್ಷಣ ಕಲಿಯಲು ಸಹಾಯಕವಾಯಿತು.

**ಸಮಾರೋಪ:**

20ನೇ ಶತಮಾನದ ಕಾಲ ಘಟ್ಟದಲ್ಲಿ ಕೇವಲ ಶಾಲಾ ಕಾಲೇಜುಗಳ ಸ್ಥಾಪನೆ

ಮಾತ್ರವಾಗಲಿಲ್ಲ. ಅವುಗಳ ಜೊತೆಗೆ ವಿದ್ಯಾಭ್ಯಾಸದ ಬೋಧನ ಕ್ರಮದಲ್ಲಿಯೂ ಕೂಡ ಸಾಕಷ್ಟು ಬದಲಾವಣೆಗಳಾದವು. ದೇಶೀಯ ಸಾಂಪ್ರದಾಯಿಕ ಶಾಲೆಗಳನ್ನು ಹೊರತುಪಡಿಸಿದರೆ ಸರ್ಕಾರಿ, ಮಿಷನರಿ ಮತ್ತು ಸಂಘ–ಸಂಸ್ಥೆಗಳಿಂದ ಸ್ಥಾಪಿಸಲ್ಪಟ್ಟ ಶಾಲೆಗಳಲ್ಲಿ ಏಕರೀತಿ ವಿದ್ಯಾಭ್ಯಾಸ ಕ್ರಮವು ಜಾರಿಯಲ್ಲಿತ್ತು. ಮಗ್ಗಿ, ಪದ್ಯಗಳ ಕಂಠಪಾಠ ಮೊದಲಾದವುಗಳಲ್ಲದೆ ವ್ಯವಸಾಯ, ವಿಜ್ಞಾನ, ರೇಖಾಚಿತ್ರ, ಮರಗೆಲಸ, ಆರೋಗ್ಯ, ಚರಿತ್ರೆ ಮತ್ತು ಭೂಗೋಳ ಮೊದಲಾದ ವಿಷಯಗಳನ್ನೊಳಗೊಂಡ ವಿದ್ಯಾಭ್ಯಾಸ ಕ್ರಮವು ಜಾರಿಗೆ ಬಂದಿತು. ಶಿಕ್ಷಣ ಬೋಧನ ಭಾಷಾ ವಿಷಯದಲ್ಲಿ ಪ್ರಾಥಮಿಕ ಶಾಲೆಗಳಲ್ಲಿ ಮರಾಠಿ, ಕನ್ನಡ, ಉರ್ದು ಸ್ಥಳೀಯ ಭಾಷೆಗಳನ್ನು ಮತ್ತು ಮಾಧ್ಯಮಿಕ ಹಾಗೂ ಪ್ರೌಢಶಾಲೆಗಳಲ್ಲಿ ಇಂಗ್ಲೀಷ್ ಬೋಧನೆ ಮಾಡಲಾಗುತ್ತಿತ್ತು. ಕನ್ನಡ ಮತ್ತು ಇಂಗ್ಲಿಷ್ ಮಾಧ್ಯಮದಲ್ಲಿ ಬೋಧಿಸಲಾಗುತ್ತಿತ್ತು.

**ಪರಾಮರ್ಶನ ಗ್ರಂಥಗಳು:**

1. ಕಡಕೋಳ ಎಚ್. ಎಂ., (2010), ಬಿಜಾಪುರ ಜಿಲ್ಲಾ ಸಂಸ್ಕೃತಿಕ ಪರಂಪರೆ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಬಿಜಾಪುರ
2. ಕೊಪ್ಪ ಎಸ್. ಕೆ., (1990)., ತರ್ದವಾಡಿ ನಾಡು: ಒಂದು ಅಧ್ಯಯನ ಪ್ರತಿಭಾ ಪ್ರಕಾಶನ ಇಂಡಿ.
3. ಲೋಹಿತ್ ಕುಮಾರ್., "ವಸಾಹತು ಕಾಲದ ಬಳ್ಳಾರಿ ಜಿಲ್ಲೆ", ಕನ್ನಡ ವಿವಿ ಹಂಪಿ
4. ಶಂಭುಲಿಂಗಯ್ಯ ವಿರಕ್ತಮಠ., ಲೇಖನ "ವಸಾಹತ ಕಾಲದ ವಿಜಯಪುರ ಜಿಲ್ಲೆಯ ಸಾಂಸ್ಕೃತಿಕ ಬೆಳವಣಿಗೆ"
5. ಮುನಿಸ್ವಾಮಿ ಆರ್., (1999), ಬಿಜಾಪುರ ಜಿಲ್ಲಾ ಗೆಜೆಟಿಯರ್ ಕರ್ನಾಟಕ ಸರ್ಕಾರ
6. ಕಡಕೋಳ ಹೆಚ್. ಎಂ., (2018), ಬಿಜಾಪುರು ಜಿಲ್ಲಾ ಸಂಸ್ಕೃತಿಕ ಪರಂಪರೆ, ವಿಜಯಪುರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್
7. ಐಹೊಳೆ ವಿ. ಡಿ., (2018), ಶಿಕ್ಷಣ ಮತ್ತು ಸಾಹಿತ್ಯ. ಬಿಜಾಪುರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್.
8. ಶೇಕ್ ಅಲಿ ಬಿ., (2018), ಕರ್ನಾಟಕ ಚರಿತ್ರೆ ಸಂಪುಟ ಪ್ರಸಾರಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ

**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4. 0 International License.